ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 1297/2018

ಸಿ.ಡಬ್ಲ್ಯೂ-8      ಪಿ.ಡಬ್ಲ್ಯೂ-7

ಸಾಕ್ಷಿಯ ಹೆಸರು ಃ ಲಕ್ಷ್ಮಣ ಕುಂಟಲದ

ತಂದೆಯ  ಹೆಸರು ಃ ಮರಿಯಪ್ಪ

ವಯಸ್ಸು ಃ 44 ವರ್ಷ

ಉದ್ಯೋಗ ಃ ಮುಖ್ಯಪೇದೆ

ವಾಸಸ್ಥಳ ಃ ಬಾಗಲಕೋಟ ಸಂಚಾರಿ ಠಾಣೆ.

ದಿನಾಂಕಃ 25-11-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

ನಾನು 2012 ರಿಂದ 2018 ವರೆಗೆ ಅಮೀನಗಡ  ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 07-01-2018 ರಂದು ಚಾಸಾ-13 ರವರು ಜಪ್ತಾದ ಉಸಕನ್ನು ಪರೀಕ್ಷೆ ಕುರಿತು ಗಣಿ ಮತ್ತು ಭೂ ವಿಜ್ಞಾನ ಬಾಗಲಕೋಟ ರವರಿಗೆ ನೀಡಲು ಕೇಳಿಕೊಂಡಿರುತ್ತಾರೆ. ಅದರಂತೆ ನಾನು ದಿ: 08-01-2018 ರಂದು  ಜಪ್ತಾದ ಉಸಕನ್ನು ಪರೀಕ್ಷೆ ಕುರಿತು ಗಣಿ ಮತ್ತು ಭೂ ವಿಜ್ಞಾನ ಬಾಗಲಕೋಟ ರವರಿಗೆ ನೀಡಿ ಸ್ವೀಕೃತಿ ಪತ್ರವನ್ನು ತಂದು ಚಾಸಾ-13 ರವರಿಗೆ ಒಪ್ಪಿಸಿರುತ್ತೇನೆ.  ಈ ಕುರಿತು ಚಾಸಾ-13 ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀಸವಾಲುಃ 1 ರಿಂದ  4 ನೇ ಆರೋಪಿತರ  ಪರ ಶ್ರೀ. ಬಿ.ಎನ್.ಎಮ್. ವಕೀಲರಿಂದ ಃ

ಚಾಸಾ-13 ರವರ ಆದೇಶದಂತೆ ಜಪ್ತಾದ ಉಸಕನ್ನು ಠಾಣೆಯಿಂದ ಪಡೆದುಕೊಂಡಿರುತ್ತೇನೆ. ಠಾಣೆಯಲ್ಲಿ ಸಾಕಷ್ಟು ಉಸುಕಿನ ವಾಹನಗಳು ಇದ್ದವು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಚಾಸಾ-13 ರವರು ಜಪ್ತಾದ ಉಸಕನ್ನು ಯಾವ ವಾಹನದಿಂದ ಪಡೆದುಕೊಂಡಿರುತ್ತಾರೆಂದು ನನಗೆ ಮಾಹಿತಿ ಇಲ್ಲ.  ಚಾಸಾ-13 ರವರು ಯಾವ ವಾಹನದಿಂದ ಉಸಕನ್ನು ಜಪ್ತಪಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ.   ಚಾಸಾ-13 ರವರು ಜಪ್ತಾದ ಉಸಕನ್ನು ದಿ: 07-01-2018 ರಂದು 3.00 ಗಂಟೆಗೆ ನೀಡಿರುತ್ತಾರೆ.  ಜಪ್ತಾದ ಉಸಕನ್ನು ಚಾಸಾ-13 ರವರು ಬಿಳಿ ಬಣ್ಣದ

ಚೀಲದಲ್ಲಿ ಹಾಕಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆಂದರೆ ಸರಿಯಲ್ಲ. ( ಈ ಹಂತದಲ್ಲಿ ಆರೋಪಿತರ ಪರ ವಕೀಲರು ಚಾಸಾ-13 ರವರು ನೀಡಿದ ಆದೇಶದ ದಿನ ನೀವು ಜಪ್ತಾದ ಉಸಕನ್ನು ಗಣಿ ಮತ್ತು ಭೂ ವಿಜ್ಞಾನ ಬಾಗಲಕೋಟ ರವರಿಗೆ ತಲುಪಿಸಬಹುದಿತ್ತು ಎಂದು ಸಾಕ್ಷಿ ಪ್ರಶ್ನೆಯನ್ನು ಕೇಳಿರುತ್ತಾರೆ. ಸದರಿ ಪ್ರಶ್ನೆ ಪ್ರಸ್ತುತ ಪ್ರಕರಣಕ್ಕೆ ಅಸಂಭದವಾಗಿದ್ದ ಕಾರಣ ಪ್ರಶ್ನೆಯನ್ನು ತೀರಸ್ಕರಿಸಲಾಗಿದೆ.) ಮೇಲಾಧಿಕಾರಿಗಳಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.